**ವ್ಯಾಖ್ಯಾನ**

# <u>ಸುಮ್ಮನೆ ಬರುವುದೆ ಮುಕ್ತಿ</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 55.

**ಕೀರ್ತನೆಯ ಚಿಂತನೆ:**

ಹರಿದಾಸಸಾಹಿತ್ಯ ಪರಂಪರೆಯಲ್ಲಿ ದಾಸಶ್ರೇಷ್ಠರೆಂದು ಹೆಗ್ಗಳದ ದಾಸವರೇಣ್ಯರು ಶ್ರೀ ಪುರಂದರದಾಸರು. ಆಚಾರ್ಯ ಮಧ್ವರ ಸಿದ್ಧಾಂತದ ಸಾರಸರ್ವಸ್ವವನ್ನು ಪದ್ಯರೂಪದಿ ಆಡುಭಾಷೆಯಲ್ಲಿ ಶ್ರೀಸಾಮಾನ್ಯರಿಗೂ ಎಟುಕುವಂತೆ, ಮನಮುಟ್ಟುವಂತೆ ಮುಂದಿಟ್ಟ ಕೀರುತಿ ಇವರದು. ಶ್ರೀವ್ಯಾಸರಾಜರಿಂದ ದೀಕ್ಷೆ ಪಡೆದು, ದಾಸಕೂಟದ ಪ್ರವರ್ತಕರಾಗಿ, ಜನರಿದ್ದಲ್ಲಿಗೆ ಹೋಗಿ ತತ್ತ್ವ ಪ್ರಸಾರ ಮಾಡಿದ ಪುಣ್ಯಾತ್ಮರು. ಇವರ ಸಾಹಿತ್ಯ ಪುರಂದರೋಪನಿಷತ್ ಎಂಬ ಯಶಸ್ಸಿಗೆ ಪಾತ್ರವಾದರೆ, ಇವರ ಪಾವನ ಜೀವನ ಸಜ್ಜನರಿಗೆ ಜೀವ ತುಂಬಿತು. ಇವರ ಒಂದು ಕೃತಿಯಲ್ಲಿ ಭಗವಂತನ ಸ್ಥಾನವಾದ ಮುಕ್ತಿ (ಮೋಕ್ಷ)ಯನ್ನು ಪಡೆಯಲು ಬೇಕಾದ ಅಗತ್ಯ ಸಾಧನೆಗಳ ಬಗ್ಗೆ ಮಾಡಿದ ವಿಶ್ಲೇಷಣೆಯನ್ನು ಕಾಣಬಹುದು. ಮುಖ್ಯವಾಗಿ ಭಕ್ತಿಯು ಸ್ಥಿರವಾಗಿ ನೆಲೆಸಲು ಬೇಕಾದ ಸಾಧನೆಗಳನ್ನು ಒಕ್ಕಣಿಸುವರು.

**ಸುಮ್ಮನೆ ಬರುವುದೆ ಮುಕ್ತಿ ॥ ಪ ॥**

**ನಮ್ಮ ಅಚ್ಯುತಾನಂತನ ನೆನೆಯದೆ ಭಕ್ತಿ ॥ ಅ.ಪ. ॥**

ಹುಟ್ಟಿಬಂದ ಎಲ್ಲರ ಬಯಕೆ ಸುಖಜೀವನ. ಇದನ್ನೇ ಇಹ ಪರಂಗಳಲ್ಲಿ ಸಾಧಿಸುವ ಹಂಬಲ. ಈ ನಿತ್ಯ ಸುಖರೂಪದ ಆನಂದವನ್ನೇ ಶಾಸ್ತ್ರಗಳು ಮುಕ್ತಿ ಎಂದು ಸಾರಿದವು. ಮುಕ್ತಿಯ ಸ್ವರೂಪವನ್ನು ಅನೇಕರು ಅನೇಕತೆರನಾಗಿ ವ್ಯಾಖ್ಯಾನಿಸಿದರೂ, ಮಧ್ವಮತಾನುಯಾಯಿಗಳಾದ ಶ್ರೀಪುರಂದರದಾಸರು 'ಮುಕ್ತಿಃ ನೈಜ ಸುಖಾನುಭೂತಿಃ' ಜೀವರ ಸ್ವರೂಪದ ಆನಂದ ಆವಿರ್ಭಾವ ರೂಪವೇ ಮುಕ್ತಿ ಎಂದರು. ಆದರೆ ಸಜ್ಜನರು ಇದನ್ನು ಪಡೆಯುವ ಮಾರ್ಗವನ್ನು ತಿಳಿಯದಾದರು. ಅದಕ್ಕೆ ದಾಸರ ಉದ್ಗಾರ 'ಸುಮ್ಮನೆ

ಬರುವುದೆ ಮುಕ್ತಿ' ಎಂದು. ದಾಸರು ಇನ್ನೊಂದು ಕಡೆ 'ಸುಲಭವಲ್ಲವೋ ಮಹದಾನಂದ' ಎಂದು ಹೇಳಿದ್ದುಂಟು. ಇದೇ ಕೀರ್ತನೆಯ ಕಡೆಯಲ್ಲಿಯ "ಪುರಂದರವಿಠಲನ ದಯವಾಗೋ ತನಕ' ಎಂಬ ಯುಕ್ತಿ ಈ ಪ್ರಸಂಗದಲ್ಲೂ ಅನ್ವಯವಾಗುತ್ತದೆ. ಈ ಮುಕ್ತಿಗೆ ಸಾಧನವು 'ಅಮಲಾ ಭಕ್ತಿಃ ತತ್ಸಾಧನಮ್' ಎಂದಂತೆ ನಿರ್ಮಲವಾದ ನಿರವಧಿಕ ನಿರ್ವ್ಯಾಜ ನಿರಾಡಂಬರ ಅಚಲ ಭಕ್ತಿಯೇ ಆಗಿದೆ. ಅದಕ್ಕೆ ದಾಸರು ಅಚ್ಯುತಾನಂತನ ನೆನೆಯದೆ ಭಕ್ತಿ ಎಂದರು. ಅದನ್ನು ಪಡೆಯುವ ಸಾಧನವನ್ನು ಇಲ್ಲಿ ಮನಮುಟ್ಟುವಂತೆ ದಾಸರು ವ್ಯಾಖ್ಯಾನಿಸಿ ಮಹದುಪಕಾರ ಮಾಡಿರುವರು.

ಜೀವರು ಈ ಸಂಸಾರವೆಂಬ ಬಂಧನದಿಂದ ಮುಕ್ತರಾಗುವುದು ಭಗವಂತನ ಸಾಕ್ಷಾತ್ಕಾರ ಪಡೆದು ಅವನ ಅತ್ಯರ್ಥ ಪ್ರಸಾದವನ್ನು ಪಡೆದಾಗ ಮಾತ್ರ. ಅಂದರೆ ಭಗವಂತನೇ, 'ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ' ಈ ಸಂಸಾರ ಬಂಧಕನು ಮತ್ತು ಮೋಚಕನೂ ಅವನೇ ಆಗಿರುವ. ಭವಸಾಗರದಿಂದ ಅಂಬಿಗನಾಗಿ ದಾಟಿಸುವವನೂ ಅವನೆ. ಅಂತಹ ನಿತ್ಯ ಸುಖದ ತಾಣವನ್ನು ಕಲ್ಪಿಸುವ ಶ್ರೀಹರಿಯನ್ನು ಪಡೆಯುವ ಬಗೆಯನ್ನು ದಾಸರು ಸಾಧನಗಳ ಮೂಲಕವೆಂದು ಬಣ್ಣಿಸಿರುವರು.

ಶ್ರೀಕೃಷ್ಣನೇ ಹೇಳಿದಂತೆ **'ಭಕ್ತ್ಯಾತ್ವನನ್ಯಯಾ ಶಕ್ಯ ಅಹಮೇವಂವಿಧೋऽರ್ಜುನ'** ಭಗವಂತ ಅನನ್ಯವಾದ ನಿರ್ಮಲ ಭಕ್ತಿಯಿಂದ ಮಾತ್ರ ತಿಳಿಯಲು ಹೊಂದಲು ಶಕ್ಯ ಎಂದಿರುವ. ಶ್ರೀಮದಾನಂದತೀರ್ಥರು ತಮ್ಮ ಭಾಷ್ಯದಲ್ಲಿ ಇದನ್ನು ವಿಶದಪಡಿಸಿರುವರು. **'ವಿಷ್ಣೌ ಭಕ್ತಿವಿಶೇಷೇಣ ಮೋಕ್ಷಾವಾಪ್ತೌ ಹಿ ಕಾರಣಂ'** ಭಗವಂತನಲ್ಲಿ ಪರಮಭಕ್ತಿಯನ್ನು ಮಾಡುವುದೇ ಮೋಕ್ಷಹೇತು ಎಂದು ಹೇಳಿ ಮುಂದುವರೆಸಿ **'ಯಸ್ಯದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರುಃ'** ಎಂದು ತಾರತಮ್ಯವನ್ನು ಸೂಚಿಸಿರುವರು. ಸಾರಾಂಶ ರೂಪದಲ್ಲಿ ಶ್ರೀಮದಾಚಾರ್ಯರು –

**ವಿಷ್ಣು ಭಕ್ತಿಃ ದೇವಭಕ್ತಿಂ ಗುರುಭಕ್ತಿಃ ತಥೈವ ಚ ।**
**ತತ್ತತ್ ಶ್ರೇಷ್ಠ್ಯಾನುಸಾರೇಣ ಮುಕ್ತೌನಿಯತ ಸಾಧನಮ್ ।**
**ಭಕ್ತಿ ಪೂರ್ತೌ ಭವೇನ್ಮುಕ್ತಿಃ ತದಭಾವೇ ಚ ನೋ ಭವೇತ್ ॥**

ತಾರತಮ್ಯಾನುಸಾರವಾಗಿ ಮಾಡುವ ಭಕ್ತಿಯೇ ಮೋಕ್ಷಕ್ಕೆ ಮುಖ್ಯ ಕಾರಣವೆಂದು ನಿರೂಪಿಸಿರುವರು. ಭಕ್ತಿಯ ಸ್ವರೂಪವನ್ನು ಶ್ರೀಮದಾಚಾರ್ಯರು

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕಃ ತಯಾ ಮುಕ್ತಿರ್ನಚಾನ್ಯಥಾ ॥**

ಶ್ರೀಹರಿಯಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವೂ, ನಿಶ್ಚಿತವಾದ ಎಲ್ಲೆಡೆಗಿಂತಲೂ ಅತ್ಯಧಿಕವಾದ ನಿರವಧಿಕವಾದ ನಿಶ್ಚಲವಾದ ಸ್ನೇಹವೇ (ಪ್ರೀತಿಯೇ) ಭಕ್ತಿಯು. ಇದರ ವಿನಃ ಮುಕ್ತಿ ಎಂಬುದಿಲ್ಲ. ಲಕ್ಷ್ಮೀದೇವಿಗೆ ಒಡೆಯನಾದ ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯು – **'ಭಕ್ತ್ಯೈವತುಷ್ಟಿಮಭ್ಯೇತಿ ವಿಷ್ಣುಃ ನಾನ್ಯೇನ ಕೇನಚಿತ್ । ಸ ಏವ ಮುಕ್ತಿದಾತಾ ಚ ಭಕ್ತಿಃ ತತ್ರೈವ ಕಾರಣಮ್ ॥'** ಭಗವಂತನ ಪ್ರಸನ್ನನಾಗುವುದು ಕೇವಲ ಭಕ್ತಿಯಿಂದ ಮಾತ್ರ.

ಶ್ರೀಪುರಂದರದಾಸರು ಇಂತಹ ಭಕ್ತಿಯು ಅಚ್ಯುತಾನಂತನ ನೆನೆಯುವುದರಿಂದ ಲಭ್ಯವೆನ್ನುವರು. ಇಲ್ಲಿ ಹೇಳಿದ ಅಚ್ಯುತ ಅನಂತ ಪದಗಳು ಬಹಳ ಔಚಿತ್ಯಪೂರ್ಣವಾಗಿವೆ. ಈ ಎರಡು ನಾಮಗಳಲ್ಲಿ ಭಗವಂತನ ಎಲ್ಲ ಗುಣಗಳೂ ಅಡಕವಾಗಿದೆ. ಶ್ರೀಮದಾಚಾರ್ಯರು ತಮ್ಮ ಕೃಷ್ಣಾಮೃತಮಹಾರ್ಣವದಲ್ಲಿ ವ್ಯಾಸರ ಉಕ್ತಿಯನ್ನು ಉದಾಹರಿಸುತ್ತಾ,

**ಅಚ್ಯುತಾನಂತಗೋವಿಂದ ನಾಮೋಚ್ಚಾರಣಭೇಷಜಾಃ ।**
**ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥**

ಅಚ್ಯುತಾನಂತಗೋವಿಂದ ಎಂಬ ನಾಮಗಳನ್ನು ಸ್ಮರಣಮಾಡುವದು ಸಕಲ ರೋಗಗಳಿಗೂ (ಭವರೋಗಕ್ಕೂ) ಪರಮ ಔಷಧಿ ಎಂಬುದು ಸತ್ಯ. ಇದರರ್ಥವನ್ನೇ ದಾಸರು –

**'**ಸ್ಮರಣೆ ಒಂದೇ ಸಾಲದೆ ಗೋವಿಂದನ । ನಾಮ ಒಂದೇ ಸಾಲದೆ ?' ಎಂದಿರುವರು.

ಇಂತಹ ಭಕ್ತಿಯನ್ನು ಸಂಪಾದಿಸಲು ಬೇಕಾದ ಸಾಧನಗಳನ್ನು ಅಂದರೆ ಹಿನ್ನೆಲೆಯ ಸಿದ್ಧತೆಗಳನ್ನು ದಾಸರು ಸುಂದರವಾಗಿ ನಿರೂಪಿಸಿರುವುದನ್ನು ಅವರ ಈ ಕೃತಿಯಲ್ಲಿ ನೋಡಲು ಪ್ರಯತ್ನಿಸೋಣ. ದಾಸರ ಈ ಮಾತುಗಳು ನಿತ್ಯ ಜೀವನದಲ್ಲಿ ಸುಖಬಾಳನ್ನು ಸಾಗಿಸಲು ಹಾಗೆಯೇ ಪರಂಪರೆಯಾಗಿ ಭಗವಂತನನ್ನು ಕಂಡು ಅವನ ಅನುಗ್ರಹಕ್ಕೆ ಪಾತ್ರರಾಗಿ ನಿತ್ಯಾನಂದಮಯದ ನೆಲೆಯಾದ ಮುಕ್ತಿಯನ್ನು ಸಾಧಿಸಲು ಅನುವಾಗುವಲ್ಲಿ ಸಂಶಯವಿಲ್ಲ.

**ಮನದಲ್ಲಿ ದೃಢವಿರಬೇಕು ಪಾಪಿ**
**ಜನರ ಸಂಸರ್ಗವ ನೀಗಲು ಬೇಕು ।**
**ಅನುಮಾನವನು ಬಿಡಬೇಕು ತನ್ನ**
**ತನು ಮನ ಧನವನೊಪ್ಪಿಸಿಕೊಡಬೇಕು ॥ 1 ॥**

ಸಾಧಕನ ಜೀವನದ ಸಾಧನೆಯ ಸಾರವನ್ನೇ ಬಿಚ್ಚಿಟ್ಟಿರುವರು. ಮನಸ್ಸಿನಲ್ಲಿ ಭಗವಂತನ ಹಾಗೂ ಜಗತ್ತಿನ ಬಗ್ಗೆ ಯಥಾರ್ಥಜ್ಞಾನವನ್ನು ಹೊಂದಿರಬೇಕು. ಸಂಶಯ ಹಾಗೂ ಮಿಥ್ಯಾಜ್ಞಾನವು ಎಂದಿಗೂ ನಿಶ್ಚಿತಜ್ಞಾನಕ್ಕೆ ಅಡ್ಡಿಯಾದದ್ದು. ಸತ್ಯವಾದದ್ದನ್ನು ತಿಳಿಯುವುದು ಮೊದಲ ಹೆಜ್ಜೆ ಎನ್ನುವರು. ದೃಢವಾದ ಸ್ಥಿರವಾದ ಜ್ಞಾನದ ಜೊತೆಗೆ ನಮ್ಮ ಕಾರ್ಯದಲ್ಲೂ ನಿಶ್ಚಿತ ವಿವೇಚನೆ ಇರಬೇಕು. ನಿತ್ಯ ಧರ್ಮಾನುಷ್ಠಾನವೂ ನಮ್ಮನ್ನು ಉತ್ತಮ ಗತಿಗೆ ಕೊಂಡೊಯ್ಯಬಲ್ಲದ್ದೆಂಬ ಅಚಲವಾದ ತತ್ತ್ವನಿಷ್ಠನಾಗಿರಬೇಕೆನ್ನುವರು. ಇದನ್ನು ಪಡೆಯಲು ಸತ್ಸಂಗ-ಸಾಧುಸಂಗ ಅತ್ಯಾವಶ್ಯಕ. ಅದಕ್ಕೆ ದಾಸರು 'ಸಂಗವಾಗಲಿ ಸಾಧು ಸಂಗವಾಗಲಿ, ಸಂಗದಿಂದ ಲಿಂಗದೇಹ ಭಂಗವಾಗಲಿ' ಎಂದು ಎಚ್ಚರಿಸಿರುವುದನ್ನು ಮರೆಯಬಾರದು, 'ದರ್ಶನಾದೇವ ಸಾಧವಃ- ತೇ ಪುನಂತಿ' ಎಂಬ ಭಾಗತೋಕ್ತಿಯಂತೆ ಸಜ್ಜನರ ಸಹವಾಸ ಸಂಕಟಹರನಾದ ಶ್ರೀಹರಿಯ ದರುಶನಕ್ಕೆ ಮಹಾದ್ವಾರವಾಗಿದೆ. ಇದನ್ನು ಪಡೆಯಲು ಎಂದಿಗೂ ದುರ್ಜನರ-ಪಾಪಿಗಳ ಸಹವಾಸದಿಂದ ದೂರವಿರಬೇಕು. ಅದನ್ನೇ ಅವರ ಸಂಸರ್ಗ ನೀಗಿರೆಂದು ಹೇಳಿದರು. ಇದನ್ನೇ ಪ್ರಸನ್ನವೆಂಕಟದಾಸರು –

**ಅಚ್ಯುತಾಂಘ್ರಿನಿಷ್ಠರ ಯದೃಚ್ಛಾಲಾಭ ತುಷ್ಟರ ।**
**ನಿಶ್ಚಿತ ಜ್ಞಾನವಂತರ ಅಚ್ಚಭಾಗವತರ ನಿತ್ಯ 1.**

ಎಂದು ದಾಸರ ಮಾತಿಗೆ ಪೂರಕವಾದಿ ಸಾರವನ್ನೇ ಇಲ್ಲಿ ಇಟ್ಟಿರುವರು. ಇದಕ್ಕೆ ಮುಖ್ಯ ಕಾರಣ ಅಚ್ಯುತನ ಪ್ರಿಯರೇ ಭಾಗವತರು-ಬಾಂಧವರು.

ದಾಸರು ಯಾವದೇ ಪ್ರಮೇಯ ವಿಷಯದಲ್ಲಿ ಅನುಮಾನ ಅಂದರೆ ಸಂದೇಹ-ಸಂಶಯವು ಇರಬಾರದೆಂದರು. ಯಥಾರ್ಥಜ್ಞಾನವು ಮಾತ್ರ ತತ್ತ್ವವನ್ನು ತಿಳಿಸಿಕೊಡಬಲ್ಲ ಪ್ರಮಾಣವಾಗಿದೆ. ಇದು ಸೊತ್ತಮ ಗುರುಗಳಿಂದ ಮಾತ್ರ ತತ್ತ್ವನಿಶ್ಚಯವಾಗುವದು. ಅದಕ್ಕೆ ಗುರುಗಳನ್ನೇ ಆಶ್ರಯಿಸಬೇಕು. ಇದಕ್ಕೆ ಅಡ್ಡಿಯಾಗುವ ವಸ್ತುಗಳೆಂದರೆ ನಮ್ಮಲ್ಲಿ ನೆಲೆಹೂಡಿರುವ ಸ್ವಾರ್ಥ-ಪ್ರತಿಷ್ಠೆಗಳು, ಇದಕ್ಕೆ ಪುಷ್ಟಿಕೊಡುವ

ಅರಿಷಡ್ವರ್ಗಗಳು. ಇವು ಪುರುಷಾರ್ಥಗಳ ಸಂಪಾದನೆಗೆ ಆತಂಕವಾದವು. ಇವುಗಳಿಗೆ ಹೇತುವಾದವುಗಳೇ ನಮ್ಮಲ್ಲಿಯ ತನು–ಮನ–ಧನಗಳು. ಅದಕ್ಕೆ ದಾಸರು ಇವುಗಳು ಭಗವಂತನಿಂದಲೇ ಬಂದದ್ದು. ಅವನ್ನು ಅವನಿಗೆ ಒಪ್ಪಿಸಿಕೊಳ್ಳಲು ಆದೇಶವಿತ್ತರು. ಇದನ್ನೇ–

'ತನು ನಿನ್ನದು ಜೀವನ ನಿನ್ನದು ರಂಗ । ಅನುದಿನದಲಿ ಬಾಹ ಸುಖದುಃಖ ನಿನ್ನದಯ್ಯ ।' ಎಂದು ಕನಕರು ಹೇಳಿದರೆ, ಪುರಂದರರು –

ನೀನೆ ಗತಿ ನೀನೇ ಮತಿ ಸ್ವಾಮಿ ।
ನೀನಿಲ್ಲದನ್ಯತ್ರ ದೈವಗಳ ನಾನರಿಯೆ ॥ ಎಂದು ತಮ್ಮನ್ನೇ ಸಮರ್ಪಿಸಿಕೊಂಡರು.

ಆಗ ಮಾತ್ರ ಭಗವಂತ ಒಲಿವ. ಒಲಿದು ಸಾಧಕರನ್ನು ಓಲೈಸುವ. ಭಕ್ತಿಯ ಒಂದು ರೂಪವಾದ ದಾಸ್ಯ – ಆತ್ಮನಿವೇದನೆಯು ಭಗವಂತನ ಹತ್ತಿರಕ್ಕೆ ಸೇರಿರುವ ಸಾಧನವಾಗಿದೆ. ಇದನ್ನೇ ದಾಸರು ಈ ಪದ್ಯದಲ್ಲಿ ನಿರೂಪಿಸಿರುವರು.

**ಕಾಮಕ್ರೋಧವ ಬಿಡಬೇಕು ಪರ**
**ಕಾಮಿನಿಯರ ಹಂಬಲ ಬಿಡಬೇಕು ।**
**ಹೇಮದಾಸೆಯ ಸುಡಬೇಕು ದೇಹ**
**ಬಂಧುಬಾಂಧವರ ಸ್ನೇಹವ ಬಿಡಬೇಕು ॥ 2 ॥**

ಮನುಷ್ಯನ ಯಾವದೇ ಸಾಧನೆಗೆ ಅಡ್ಡಿಯಾಗುವ ಗುಣಗಳೆಂದರೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಹಾಗೂ ಮತ್ಸರಗಳು. ನಮ್ಮ ಚಂಚಲವಾದ ಮನಸ್ಸಿನಲ್ಲಿ ಬೇರೂರಿ ಎಲ್ಲ ದುಷ್ಟ ವಿನಾಶಕ ಕೃತ್ಯಗಳನ್ನು ಮೂಡಿಸುತ್ತವೆ. ಅದಕ್ಕೆ ವಿಜಯದಾಸರು ಈ ಕಾಮಕ್ರೋಧಾದಿಗಳಿಂದ 'ಹಾರಿ ಹಾರುವ ಮನಸು ನಿಲಿಸಲಳವಲ್ಲ' ಎಂದದ್ದು. ಈ ದುರ್ಗುಣಗಳು ಇಂದ್ರಿಯಗಳಿಗೆ ವಿಷಯಗಳ ಸಂಸರ್ಗವನ್ನು ತಂದುಕೊಡುತ್ತವೆ. ಈ ವಿಷಯಗಳನ್ನು ವಿಜಯದಾಸರು 'ವಿಷಯ ಜೇನೆಂದು ಮೆದ್ದರೆ ಅದು ವಿಷಕಂಡ್ಯ ಮನವೆ' ಎಂದರು. ವಿಷಯಗಳ ಕಾಂತಾರದಲಿ ಸಿಲುಕಿದವ ಹೊರಬರುವುದು ಬಹು ಕಷ್ಟ ಅದಕ್ಕೆಂದೆ ಬಹು ಮುಖ್ಯವಾದ ಪರಸ್ತ್ರೀಯರ ದರುಶನ ಸ್ಪರ್ಶನಾದಿಗಳು ಅಥವಾ ಸಹವಾಸ ದುರಂತಕ್ಕೆ

ಕಾರಣವಾಗಿ ಸಾಧನೆಗಳಿಗೆ ಮುಳುವಾಗಿ ಅಧೋಗತಿಗೆ ಕೊಂಡೊಯ್ಯುವುದು. ಅದಕ್ಕೆ ದಾಸರು ಕಾಮಿನಿಯರ ಹಂಬಲ (ತವಕ–ಇಚ್ಛೆ) ಬಿಡಿರೆಂದು ಉಪದೇಶಿಸಿದರು.

ಇದರ ನಂತರದ ವಿಷಯದಾಶೆ ಎಂದರೆ ಹೊನ್ನಿನಾಸೆ. ಆಸ್ತಿ–ಅಂತಸ್ತು–ಐಶ್ವರ್ಯಗಳ ಗಳಿಸುವ ದುರಾಸೆ. 'ತೇನತ್ಯಕ್ತೇನ ಭುಂಜೀಥಾಃ' ಎಂದಂತೆ ಭಗವಂತನಿಂದ ಕೊಡಲ್ಪಟ್ಟಿದ್ದರಲ್ಲಿ ಜೀವಿಸಿ ಸುಖದಿಂದಿರಬೇಕು. ಈ ಹೊನ್ನು ಮಣ್ಣಿನಾಸೆ ನರಕದ ದ್ವಾರಕ್ಕೆ ಕೊಡೊಯ್ಯದಿರದು. ಇದರ ಹಂಬಲ ಬಿಡಿರೆಂದರು. ಇನ್ನು ಮಾಡಲೇಬೇಕಾದ ವಿಧಿಯಾದ ಶ್ರೀಹರಿಯ ನಾಮ ಸಂಕೀರ್ತನೆಯನ್ನು ಬಿಡದಿರಿ ಎಂದರು. ಹರಿದಾಸ ಸಾಹಿತ್ಯದ ಸಂದೇಶವೇ 'ಹರಿಸ್ಮರಣೆ ಮಾಡು ನಿರಂತರ' ಎಂಬುದು, ಕಾರಣ ಪರಗತಿಗೆ ಇದು ಸಾಧನವಾಗಿದೆ.

**ಸಂದಣಿಗಳ ಬಿಡಬೇಕು ದೇಹ**
**ಬಂಧು ಬಾಂಧವರ ಸ್ನೇಹ ಬಿಡಬೇಕು ।**
**ನಿಂದಿಸಿದರೆ ಹಿಗ್ಗಬೇಕು ಕೋಪ**
**ಬಂದಾಗ ಸ್ಮರಣೆ ಬಿಡದಿರಬೇಕು ॥ 3 ॥**

ಶ್ರೀಪುರಂದರದಾಸರ ಈ ಮಾತುಗಳ ಪಾಲನೆ ಎಂತಹವನನ್ನೂ ಸುಖದ ಸುಪ್ಪರಿಕೆಯಲ್ಲಿ ಕೂಡಿಸುವಂತಹದ್ದು. ಮನುಷ್ಯನ ಸಾಧನೆಗೆ ತಡೆ ಹಿಡಿಯುವ ಮೊದಲ ಪ್ರಸಂಗವೆಂದರೆ ಸಂದಣಿ (ಗುಂಪು–ನಿಬಿಡತೆ–ಗದ್ದಲ). ಏಕಾಗ್ರತೆಗೆ ಭಂಗತರುವ ಸಹಜ ಸಂಪರ್ಕ ಇದಾಗಿದೆ. ಸಾಮಾನ್ಯವಾಗಿ ಎಲ್ಲ ವಾದ–ವಿವಾದಗಳಿಗೂ ಈ ಕೂಟಗಳೇ ಕಾರಣ. ಬಾಲಮಧ್ವರಾದ ವಾಸುದೇವನು ಒಮ್ಮೆ ಅವನ ತಂದೆ ತಾಯಿಗಳೊಂದಿಗೆ ಬಂಧುಗಳ ಮದುವೆ ಮನೆಗೆ ಹೋದಾಗ ಅಲ್ಲಿಯ ಉತ್ಸವದ ಸಂಭ್ರಮ, ತುಮುಲರವ–ಕೋಲಾಹಲಗಳಿಂದ ದೂರವಿರಲು ಒಬ್ಬನೆ ಹೊರಬಂದದ್ದನ್ನು ಸುಮಧ್ವವಿಜಯಕಾರರು ದಾಖಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಅದಕ್ಕೆ ದಾಸರು ಸಂದಣಿಗಳ ಬಿಡಬೇಕೆಂದರು. ಭಗವಂತನನ್ನು ಆರಾಧಿಸಲು, ಧ್ಯಾನಿಸಲು, ಜಪ–ತಪಾದಿಗಳಿಗೆ ಗದ್ದಲದ ವಾತಾವರಣ ಎಂದಿಗೂ ಸಿದ್ಧಿಯನ್ನು ತಂದುಕೊಡದೆಂಬ ಮರ್ಮವನ್ನು ಇಲ್ಲಿ ತಿಳಿಸಿರುವರು.

ಶ್ರೀಕೃಷ್ಣಗೀತೆಯಲಿ ಅಭಿಮಾನ ತ್ಯಾಗದ ಬಗ್ಗೆ ಬಹಳಷ್ಟು ಹೇಳಿರುವುದು ತಿಳಿದಿದೆ. ಆ ಪ್ರಸಂಗದಲ್ಲಿ ಒಬ್ಬ ಸಾಧನ ಜೀವಿ 'ಪದ್ಮಪತ್ರ ಇವಾಂಭಸಾ' ಪದ್ಮದೆಲೆಯ ಮೇಲೆ ಬಿದ್ದ ಹನಿಯಂತಿರಬೇಕೆಂದು ಉಪಮೆ

ಕೊಟ್ಟಿರುವ ಇದನ್ನೇ ದಾಸರು 'ಸಂಸಾರದಲಿ ಇರಬೇಕು ಇರದಿರಬೇಕು' ಎಂದು ಭಾಷಾಂತರಿಸಿರುವರು. ಸಂಘಜೀವಿಯಾದ ನಾವು ಹೊರಬರಲು ಸಾಧ್ಯವಿಲ್ಲ. ಇದು ಸಾಧ್ಯವಾಗುವುದು ಇದರೊಂದಿಗಿನ ದುರಭಿಮಾನ ಬಿಟ್ಟಾಗ ಮಾತ್ರ. ಬಂಧು ಬಾಂಧವರ ಸ್ನೇಹ ಬಿಡಬೇಕೆಂದರೆ ಅದರಿಂದ ಅಂಟುತನ (ಸ್ನೇಹ) ಬಿಡಬೇಕೆಂದಾಗಿದೆ. ವಿಷಯಗಳ ಸಂಪರ್ಕ, ಬಂಧುಬಾಂಧವರ ಸಹವರ್ತನೆ ಹೇಗಿರಬೇಕೆಂದರೆ – 'ಆಗಮೋಪಾಯಿನೋ ಅನಿತ್ಯಾಃ ತಾನ್ ತಿತಿಕ್ಷಸ್ವ' ಶಾಶ್ವತವಲ್ಲದ ಬಂದು ಹೋಗುವಂತಹ ವಿಷಯಗಳ ಸಂಪರ್ಕದಿಂದ ನೀಗಿ ನಿಲ್ಲುವದು. ಏಕೆಂದರೆ ಅಭಿಮಾನವೇ ಸುಖ ದುಃಖಗಳಿಗೆ ಕಾರಣವಾದ್ದರಿಂದ. ಹೀಗೆ ಗೀತೆಯ ಸಂದೇಶ ಇಲ್ಲಿದೆ. ಇದರ ಸಾರವನ್ನೇ ಪುರಂದರದಾಸರು 'ಏಕಾಂತವಿರಬೇಕು ಲೋಕವಾರ್ತೆ ಬಿಡಬೇಕು' ಎಂದು ಹೇಳಿದರು.

ಶ್ರೀಪುರಂದರರು ಒಂದು ಕೀರ್ತನೆಯಲ್ಲಿ ಹೇಳಿದ ಮಾತು ನೆನಪಿಸಿಕೊಳ್ಳೋಣ.

ಒಳ್ಳೆ ಜನಗಳ ನಿಂದೆಯನು ಮಾಡಬೇಡ ।
ಒಳ್ಳೆಯವನೆಂದರೆ ಹಿಗ್ಗಬೇಡ ॥

ದಾಸರು 'ನಿಂದಕರಿರಬೇಕು' ಎಂದ ಮಾತು ಹೀಗಿದೆ. ನಮ್ಮ ದೋಷಗಳನ್ನು ತಿದ್ದಿಕೊಳ್ಳಲು ಅಂತಹವರ ಅವಶ್ಯಕತೆಯಿದೆಯೆಂದು ತಿಳಿಯಬೇಕೆನ್ನುವರು. ಅದಕ್ಕೆ ಸಾಧಕ ಜೀವಿಯಾದವನು ಇತರರು ನಿಂದಿಸಿದರೆ ಹಿಗ್ಗಬೇಕು. ಯಾವುದೇ ಸತ್ಕಾರ್ಯಗಳ ಆಚರಣೆಗೆ ಇಂದ್ರಿಯ ನಿಗ್ರಹ ಅತಿ ಮುಖ್ಯವೆಂದು ಶಾಸ್ತ್ರಗಳು ಸಾರಿವೆ. ಮನುಷ್ಯನಿಗೆ ಕೋಪವೆಂಬುದೊಂದು ಶಾಪ. ಇದರಿಂದ ದೂರವಿರುವುದೆಂದರೆ ಮನೋನಿಗ್ರಹವನ್ನು ತಾಳುವುದು. ಏಕೆಂದರೆ ಶ್ರೀಕೃಷ್ಣ ಹೇಳಿದಂತೆ –

'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಎಂದಂತೆ, ನಮ್ಮ ಒಳಿತು–ಕೆಡಕುಗಳಿಗೆ ಮನವೇ ಕಾರಣವಾಗಿದೆ. ಅದಕ್ಕೆ ದಾಸರು ಕೋಪಬಂದಾಗ ಸೈರಣೆ (ತಾಳ್ಮೆ–ಸಹನೆ) ಇರಬೇಕೆಂದರು. ಇಲ್ಲವಾದಲ್ಲಿ ಜೀವನದಲ್ಲಿ ಇದರ ದುಷ್ಪರಿಣಾಮವನ್ನು ಎದುರಿಸಬೇಕಾಗುವುದು ಖಂಡಿತ. ಅದಕ್ಕೆ ಶ್ರೀವಾದಿರಾಜರು 'ತಾಳುವಿಕೆಗಿಂತ ತಪವು ಇಲ್ಲ' ಎಂದು ಬೋಧಿಸಿದರು. ಇದನ್ನೇ ವಿವರಿಸಿದ ಕನಕದಾಸರು –

ತಲ್ಲಣಸದಿರು ಕಂಡ್ಯ ತಾಳು ಮನವೆ ।
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ ಎಂದರು.

ಹಿಂದಿನ ಎಲ್ಲ ಮಹನೀಯರೂ ಒಕ್ಕೊರಲಿನಿಂದ ಹೇಳುವ ಮಾತು 'ತಾಳಿದವನು ಬಾಳ್ಯಾನು' ಎಂದು.

**ಹರಿಯೆ ಗುರುವೆನ್ನಬೇಕು ಶ್ರೀ**
**ಹರಿಯೆ ಪರದೈವವೆಂತೆನ್ನಬೇಕು ।**
**ಪರವಸ್ತು ಒಲ್ಲೆನ್ನಬೇಕು ದೇಹ**
**ಸ್ಥಿರವಲ್ಲವೆಂತೆಂದು ತಿಳಿಯಲು ಬೇಕು ॥ 4 ॥**

ಶ್ರೀಮದಾನಂದತೀರ್ಥರು ತಮ್ಮ ದ್ವಾದಶಸ್ತೋತ್ರದಲ್ಲಿ 'ಹರಿರೇವ ಪರೋ ಹರಿರೇವ ಗುರುಃ ಹರಿರೇವ ಜಗತ್ಪಿತೃಮಾತೃಗತಿಃ' ॥ ಎಂದಂತೆ ಜಗತ್ತಿನ ಸೃಷ್ಟ್ಯಾದಿ ಅಷ್ಟಕರ್ತೃವಾದ ಶ್ರೀಹರಿಯೇ ಎಲ್ಲಕ್ಕೂ ಕಾರಣನಾಗಿ ಎಲ್ಲವೂ ಆಗಿರುವ. ಶ್ರೀಕೃಷ್ಣ ಗೀತೆಯಲ್ಲಿ –

'ಅಹಂ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' । ಎಂದಂತೆ ಎಲ್ಲ ಚರಾಚರ ಜಗತ್ತಿಗೆ ನಿಮಿತ್ತ ಕಾರಣನು ಸ್ವತಂತ್ರನು ಆದ ಆ ಪ್ರಭು ವಿಷ್ಣುವೆ ಆಗಿರುವ. ಅದಕ್ಕೆ ದಾಸರು ಜಗದ್ಗುರುವಾದ ವೇದವ್ಯಾಸ ಕಪಿಲ ದತ್ತಾತ್ರೇಯಾದಿ ರೂಪಗಳಿಂದ ತತ್ತ್ವಬೋಧಿಸಿದವನನ್ನೆ ಗುರುವೆನ್ನಬೇಕೆಂದರು. ಇನ್ನೊಂದು ಕಡೆ 'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ' ಎಂದೂ ಸಾರಿರುವ. ಮತ್ತೊಂದು ಕೀರ್ತನೆಯಲ್ಲಿ

ಹರಿಯೆ ಸರ್ವೋತ್ತಮ ಹರಿಯೆ ಪರದೇವತೆ
ಹರಿ ಸರ್ವ ವಿಶ್ವಮಯಂ ಜಗತು ॥

ಹೀಗೆ ಹೇಳಿದ ದಾಸರು ಮಾಡಿದ ಶಪಥ ಹೀಗಿದೆ.

ಹರಿಯಲ್ಲದನ್ಯತ್ರ ದೈವಂಗಳಿಲ್ಲವೆಂದು
ಉರಗನ ಹೆಡೆಯನು ಪಿಡಿದು ಹೇಳುವೆನಯ್ಯ ॥

ಶ್ರೀಪುರಂದರರು 'ಬೇಡಿದೆರ ಎನ್ನೊಡೆಯನ ಬೇಡುವೆ' ಎಂದ ಕಾರಣ 'ಈಶಾವಾಸ್ಯ ಮಿದಂ ಜಗತ್' ಎಂದಾಗಿರುವುದರಿಂದ. ಭಗವಂತನಲ್ಲದ್ದು ಬೇರಿಲ್ಲ, ಇರುವುದೆಲ್ಲವೂ ಅವನ ಅಧೀನ ಹಾಗೂ ಸತ್ಯವಾದದ್ದೆಂದು ತಿಳಿಯಿರೆಂದರು. ಹೀಗಾಗಿ ಪರದ್ರವ್ಯಾದಿಗಳ ಬಯಕೆ ಬೇಡ.

ಮನುಷ್ಯ ಎಲ್ಲವನ್ನೂ ಬೇಕು ಬೇಕೆನ್ನುವದು, ಇಷ್ಟಿದ್ದರೆ ಮತ್ತಷ್ಟರಾಸೆ ಏಕೆಂದರೆ ಅವನು ಚಿರಾಯು ಎಂದು ಭ್ರಾಂತನಾದ್ದರಿಂದ. ದಾಸರು ಹೇಳಿದ್ದು ನಮ್ಮ ಇರುವಿಕೆ 'ಕ್ಷಣ ಭಂಗುರ'ದಂತೆಂದು. ಈ ದೇಹ ಸ್ಥಿರವಲ್ಲವೆಂದು ಡಂಗುರವನ್ನೇ ಸಾರಿದರು ದಾಸರು. ಆದರೂ ನಮಗೆ ಮುಂದಿನ ಚಿಂತೆ. ಇದನ್ನು ಬಿಡಿರೆಂದು 'ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್' ಎಂದು ಎಚ್ಚರಿಸಲು 'ದೇಹ ಸ್ಥಿರವಲ್ಲವೆಂತೆಂದು ತಿಳಿಯಬೇಕು' ಎಂದರು.

**ವ್ಯಾಪಾರವನು ಬಿಡಬೇಕು ನಮ್ಮ**
**ಶ್ರೀಪತಿ ಪುರಂದರವಿಠಲೆನ್ನಬೇಕು ।**
**ಪಾಪರಹಿತನಾಗಬೇಕು ಜ್ಞಾನ**
**ದೀಪ ಬೆಳಕಲಿ ಓಡಾಡಬೇಕು ॥ 5 ॥**

ಹುಟ್ಟಿ ಬಂದ ಜೀವಿಗೆ ಭಗವಂತ ಬುದ್ಧಿಯನ್ನು ಕೊಟ್ಟಿರುವ. ಇದರಿಂದ ತನ್ನ ಹಾಗೂ ಸೃಷ್ಟಿಸಿದವನ ಇರುವಿಕೆಯನ್ನು ತಿಳಿಯಲೆಂದು. ಆದರೆ ಮನುಷ್ಯನಿಗೆ ಇದು ತಿಳಿಯದಾಗಿದೆ. ಅದಕ್ಕೆ ಮಾಡಬೇಕಾದದ್ದನ್ನು ಬಿಟ್ಟು ಏನೆಲ್ಲವನ್ನೂ ಮಾಡುತ್ತಿರುವ ಇದೇ ಅನ್ಯ ವ್ಯವಹಾರ–ವ್ಯಾಪಾರವಾಗಿದೆ. ಯಾವದು ನಮ್ಮ ಸಾಧನೆಗೆ ಅಡ್ಡಿಯಾದುದ್ದೋ, ಶಾಸ್ತ್ರಗಳಿಗೆ ವಿರುದ್ಧವಾದದ್ದೋ, ಶ್ರೀಮದಾಚಾರ್ಯರ ಸಿದ್ಧಾಂತಕ್ಕೆ ಅನುಸಾರಿಯಾಗದ್ದೋ ಅವುಗಳಿಂದ ದೂರವಿರುವುದೇ ಸದ್ವೃತ್ತಿ ಎನಿಸಿಕೊಳ್ಳುವುದು. ಅದುವೇ ಪರಮಧರ್ಮ. ಇದಕ್ಕೆ ವಿರುದ್ಧವಾದ ಉದ್ಯೋಗದಿಂದ ದೂರವಿರಿ ಎಂದು ಸಂದೇಶ ವಿತ್ತರು. ಶ್ರೀಪುರಂದರದಾಸರ ಸಾಹಿತ್ಯದಲ್ಲಿ ತುಂಬಿರುವುದೇ ಧರ್ಮ ಸಂದೇಶಗಳು. ಇದನ್ನು ಪಾಲಿಸಿರೆಂದರು. ದಾಸರು ಇಂತಹ ದುರ್ವ್ಯವಹಾರದಿಂದ ದೂರವಿರಲು

ವ್ಯಾಪಾರ ಒಲಿದಾಗ ಕೋಪ ಅನ್ಯಾಯದಿ
ಶಾಪಕೊಂಬರು ಬಡವರ ಕೈಯ
ವ್ಯಾಪಾರ ಮುರಿದರೆ ತಿರಿದುಂಬರಯ್ಯ ॥ ಎಂದು ಮಾರ್ಮಿಕವಾಗಿ ತಿಳಿಸಿದರು.

ಎಲ್ಲಕ್ಕೂ ಮೂಲನಾದ ಮೂಲೇಶನೇ ಲಕ್ಷ್ಮೀಪತಿ. ಇವನೇ ಪುರಂದರವಿಠಲ ಎಂದು ಜಪಿಸುತ್ತಿರಬೇಕೆಂದರು. ಜೀವರ ಈ ಸಂಸಾರಾವಸ್ಥೆಯೇ ತಾನು ಮಾಡಿದ ಪಾಪದಿಂದಾಗಿ. ಭಗವಂತನ ಸಾಕ್ಷಾತ್ಕಾರದಿಂದ ಮಾತ್ರ ಈ ಪಾಪ ಭಸ್ಮವಾಗುವುದು. ಅದಕ್ಕೆ ಈ ಪಾಪಗಳಿಂದ ಮುಕ್ತನಾಗಲು ಭಗವಂತನ ಮಾಹಾತ್ಮ್ಯಜ್ಞಾನವನ್ನು ತಿಳಿದು ಅವನಲ್ಲಿ ಮೇಲೆ ಹೇಳಿದಂತೆ ನಿರ್ಮಲವಾದ ಭಕ್ತಿಯನ್ನು ಮಾಡಿ ಅವನ ಪ್ರೀತಿಗೆ ಅನುಗ್ರಹಕ್ಕೆ ಪಾತ್ರನಾಗಬೇಕು. ಆಗ ಮಾತ್ರ ಪಾಪಗಳೆಂಬ ದೋಷಗಳಿಂದ ದೂರನಾಗಿ ಅವನ ಸಾಕ್ಷಾತ್ಕಾರ ಪಡೆಯುವ. ಭಗವಂತನೇ ತನ್ನ ದಾಸನೆಂದು ಸ್ವೀಕರಿಸುವ.

ಈ ಕೃತಿಯಲ್ಲಿ ಶ್ರೀಪುರಂದರದಾಸರು ಮುಕ್ತಿಗೆ ಭಕ್ತಿಬೇಕು, ಆ ಭಕ್ತಿ ಸ್ಥಿರವಾಗಿ ನೆಲೆಸಬೇಕು. ಅವನ ಅನುಗ್ರಹದಿ ಸಾಧನೆಗಳನ್ನು ಪೂರೈಸಿದ ನಂತರ ಅವನೇ ಕರೆದು ತನ್ನಲ್ಲಿರಿಸಿಕೊಳ್ಳುವ. ಇದೇ ಮುಕ್ತಿ, ಜೀವರ ಸ್ವರೂಪಾನಂದಾವಿರ್ಭಾವರೂಪವಾಗಿದೆ. ಇದಕ್ಕೆ ಬೇಕಾದ, ಜೀವನದಲ್ಲಿ ಅಳವಡಿಸಿಕೊಳ್ಳುವ ಅನೇಕ ವಿಷಯಗಳನ್ನು ದಾಸರು ಉಪದೇಶಿಸಿ ಅನುಗ್ರಹಿಸಿರುವರು. ಇಹದಲ್ಲಿ ಸುಖದಿಂದಿದ್ದು ಉತ್ತಮ ಪರಗತಿ ಪಡೆಯಲು ಬೇಕಾದ ಅವಶ್ಯ ಉಪಾಯಗಳನ್ನು ಬೋಧಿಸಿ ಮಾಡಿದ ಪರಮೋಪಕಾರ ಮರೆಯಲಾಗದ್ದು.

**ಶ್ರೀ ಕೃಷ್ಣಾರ್ಪಣಮಸ್ತು**